ದಿನಾಂಕಃ 25-01-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಟಿ ಎಸ್ ವಕೀಲರಿಂದಃ**

ದಾವಾಸ್ತಿ ಮೂಲತಃ ಹೆಚ್ ನಾಗಪ್ಪ ಬಿನ್ ಉಜ್ಜಯ್ಯರವರಿಗೆ ಬಂದಿರುತ್ತದೆ. ದಾವಾಸ್ತಿ ಸದರಿಯವರ ಹೆಸರಿಗೆ ಇದ್ದ ಬಗ್ಗೆ ಯಾವುದೇ ದಾಖಲಾತಿಗಳನ್ನು ನೋಡಿಲ್ಲ ಎಂದರೆ ಸರಿ. ಸದರಿ ನಾಗಪ್ಪರವರಿಂದ ದಾವಾಸ್ತಿ ನನ್ನ ಅಜ್ಜನಾದ ಹನುಮಂತಪ್ಪ ಬಿನ್ ಗೌಡ್ರ ತಿಮ್ಮಯ್ಯನವರಿಗೆ ಬಂದಿರುತ್ತದೆ. ದಾವಾಸ್ತಿಯ ಸಂಬಂಧ ಕ್ರಯಪತ್ರವನ್ನು ಹೊರತುಪಡಿಸಿ ಪಂಚಾಯತಿ ದಾಖಲೆಗಳಲ್ಲಿ ಕ್ರಯಪತ್ರದಲ್ಲಿ ನಮೂದಿಸಿದ ಅಳತೆಗಳು ಇವೆ. ನನ್ನ ನಿಪಿ-1 ರಲ್ಲಿ ಪೂರ್ವ-ಪಶ್ಚಿಮ 35 ಗಜ, (105 ಅಡಿ). ಉತ್ತರ-ದಕ್ಷಿಣ 29 ವರೆ ಗಜ (87 ಅಡಿ) ಇದೆ. ಸದರಿ ಅಳತೆಯನ್ನು ಹೊಂದಿರುವ ಪಂಚಾಯತಿ ದಾಖಲೆಗಳು ಇವೆಯೇ ಎಂದರೆ ಸಾಕ್ಷಿ 1978 ರ ದಾಖಲೆಗಳಲ್ಲಿ ಇವೆ ಎಂದು ನುಡಿಯುತ್ತಾರೆ. ಸದರಿ 1978 ರ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಪಂಚಾಯತಿಯವರು ನಾನು ಈಗ ಇರುವ ಅನುಭವದಂತೆ ನಿಪಿ-7 ರಂತೆ ಅಳತೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ನಿಪಿ-7 ರಲ್ಲಿ ನಮೂದಿಸಿರುವ ಅಳತೆ ಪಂಚಾಯತಿ ದಾಖಲೆಗಳಲ್ಲಿ 2018 ರಿಂದ ನಮೂದಾಗಿರುತ್ತದೆ. ನಿಪಿ-6 ನ್ನು ಹೊರತುಪಡಿಸಿ ಪಂಚಾಯತಿಯಿಂದ ಅಸೆಸ್ ಮೆಂಟ್ ರಿಜಿಸ್ಟರ್ ನ ಪ್ರತಿಯಾಗಲಿ ಅಥವಾ ಡಿ ಸಿ ಬಿ ರಿಜಿಸ್ಟರ್ ನ ಪ್ರತಿಯಾಗಲಿ ಕೊಟ್ಟಿರುವುದಿಲ್ಲ. 2017 ನೇ ಸಾಲಿನಲ್ಲಿ ಪಂಚಾಯತಿಯಲ್ಲಿ ಪಿ ಡಿ ಓ ಇದ್ದರು ಎಂದರೆ ಸರಿ. ಹಾಗಾಗಿ ನಿಪಿ-6 ನ್ನು ಸದರಿ ಪಿ ಡಿ ಓ ಗಮನಕ್ಕೆ ಬಾರದಂತೆ ನಾನು ಮತ್ತು ಪಂಚಾಯತಿ ಕಾರ್ಯದರ್ಶಿ ಶಾಮೀಲಾಗಿ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಪಿ ಡಿ ಓ ರವರು ಇದ್ದಾಗ ಅವರ ಪಂಚಾಯತಿ ಕಾರ್ಯದರ್ಶಿಗಳಿಗೆ ಯಾವುದೇ ದಾಖಲೆಗಳನ್ನು ಕೊಡಲು ಅಧಿಕಾರ ಇಲ್ಲ ಎಂದರೆ ಸರಿ. ಹಾಗಾಗಿ ಈ ಹಿಂದೆ ಇದ್ದಂತಹ ದಾವಾಸ್ತಿ ಸಂಬಂಧಿತ ಪಂಚಾಯತಿ ದಾಖಲೆಗಳನ್ನು ಹಾಜರುಪಡಿಸಲು ನನಗೇನು ತೊಂದರೆಯಿಲ್ಲ ಎಂದರೆ ಸರಿ.

ನನ್ನ ಅಜ್ಜನಾದ ಗೌಡ್ರ ಹನುಮಪ್ಪನಿಗೆ ಒಬ್ಬನೇ ಮಗ ಆವನ ಹೆಸರು ಜಿ ಬಸಪ್ಪ, ಅವರು ನನ್ನ ತಂದೆ. ಸದರಿಯವರು ಮರಣ ಹೊಂದಿರುತ್ತಾರೆ. ಜಿ ಬಸಪ್ಪನವರಿಗೆ ವಾರಸುದಾರರು ಯಾರು ಇರುವುದಿಲ್ಲ. ಈ ದಾವೆಯ ಪ್ರತಿವಾದಿಗಳು ನನ್ನ ಅಜ್ಜಿಯಾದ ಸಳಕಮ್ಮ ಕೋಂ ಹನುಮಪ್ಪ ಗೌಡನ ತಮ್ಮನಾದ ಚನ್ನಬಸಪ್ಪನ ಮಕ್ಕಳು. ನನಗೆ ಬುದ್ದಿಬಂದಾಗಿನಿಂದಲೂ ಸದರಿ ಚನ್ನಬಸಪ್ಪ ಸಂತೆಬೆನ್ನೂರಿನಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ಸದರಿ ಚನ್ನಬಸಪ್ಪ ಮತ್ತು ಆತನ ವಾರಸುದಾರರಾದ ಪ್ರತಿವಾದಿಗಳು 1975 ರಿಂದಲೂ ದಾವಾಸ್ತಿಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ಸದರಿ ಪ್ರತಿವಾದಿಗಳು 1975 ರಿಂದಲೂ ದಾವಾಸ್ತಿಯಲ್ಲಿ ವಾಸವಿದ್ದ ಬಗ್ಗೆ ನಾನು ದಾವಾ ಪತ್ರದಲ್ಲಿ ನಮೂದಿಸಿರುವುದಿಲ್ಲ. ದಾವಾಸ್ತಿಯ ಖಾತೆ ಪ್ರಸ್ತುತ ನನ್ನ ಹೆಸರಿನಲ್ಲಿದೆ. ದಾವಾಸ್ತಿಯ ಖಾತೆ

ಪ್ರತಿವಾದಿಗಳ ಹೆಸರಿಗೆಯಾವತ್ತಾದರೂ ಇತ್ತೆ ಎಂದರೆ ಸಾಕ್ಷಿ 1975 ರಿಂದ ಇದೆ ಎಂದು ನುಡಿಯತ್ತಾರೆ. ಮುಂದುವರೆದು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. 1975 ರಲ್ಲಿ ನನ್ನ ಕುಟುಂಬದ ಯಜಮಾನಿಕೆಯನ್ನು ನನ್ನ ಅಜ್ಜನಾದ ಗೌಡ್ರ ಹನುಮಂತಪ್ಪನವರು ಮಾಡುತ್ತಿದ್ದರು. ಸದರಿಯವರ ಜೀವಿತಾವಧಿಯಲ್ಲಿ ಪ್ರತಿವಾದಿಗಳು ದಾವಾಸ್ತಿಯಲ್ಲಿ ಅನುಭವದಲ್ಲಿರುವುದನ್ನು ಅವರು ಎಲ್ಲಿಯೂ ಪ್ರಶ್ನಿಸಿಲ್ಲ ಎಂದರೆ ಸರಿ. ಸದರಿ ಗೌಡ್ರ ಹನುಮಂತಪ್ಪ ರವನವರು 1978 ರಲ್ಲಿ ಮೃತಪಟ್ಟಿದ್ದು ಅವರ ಮರಣಾನಂತರ ಈ ದಾವೆಯನ್ನು ದಾಖಲಿಸುವವರೆಗೂ ಸದರಿ ಖಾತೆಯನ್ನು ಯಾರು ಪ್ರಶ್ನಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು 2018 ರಲ್ಲಿ ನನ್ನ ಗಮನಕ್ಕೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ಆಸ್ತಿ ನಂ 818/404 ಸಿ ಗೆ ನಾನು ಯಾವುದೇ ಕಂದಾಯ ಕಟ್ಟಿರುವುದಿಲ್ಲ. ನಾನು ನನ್ನ ಅನುಭವದಲ್ಲಿದ್ದ ಆಸ್ತಿ ನಂ 818/404 ಸಿ ಆಸ್ತಿಗೆ ಮಾತ್ರ ಕಂದಾಯವನ್ನು ಕಟ್ಟಿರುತ್ತೇನೆ.

818/404 ಸಿ ಆಸ್ತಿ 819/404 ಸಿ ಎಂದು ಯಾವಾಗ ಬದಲಾಯಿತು ಎಂದು ನನಗೆ ನಿಖರವಾಗಿ ಗೊತ್ತಿಲ್ಲ, ಸಾಕ್ಷಿ ಮುಂದುವರೆದು 2018 ರಲ್ಲಿ ಗೊತ್ತಾಗಿರುತ್ತದೆ. 819/404 ಸಿ ಆಸ್ತಿ ನಂಬರನ್ನು ಪ್ರತಿವಾದಿಗಳು ಅನುಭವದಲ್ಲಿರುವ ಅಸ್ತಿಗೆ ಕೊಟ್ಟ ಸಂಖ್ಯೆ ಎಂದರೆ ಸರಿ. ನಾನು ಸದರಿ 819/404 ಸಿ ಯ ದಾಖಲೆಯನ್ನು ನಾನು ನೋಡಿರುವುದಿಲ್ಲ. ಆಗಿದ್ದರೆ ಸದರಿ 819/404 ಸಿ ಯನ್ನು ಯಾವ ಆಧಾರದ ಮೇಲೆ ಬರೆದಿರುತ್ತೀರ ಎಂದರೆ ಸಾಕ್ಷಿ ಇ-ಸ್ವತ್ತಿನ ಅಧಾರದಮೇಲೆ ಬರೆದಿರುತ್ತೇನೆ ಎಂದು ನುಡಿಯುತ್ತಾರೆ. 819 ರ ಆಸ್ತಿ ಈ ಮೊದಲು ಚನ್ನಬಸಪ್ಪರವರ ಹೆಸರಿಗೆ ಖಾತೆ ಇತ್ತು ಎಂದರೆ ಸರಿ. ಸದರಿಯವರು ಮೃತಪಟ್ಟು ಸುಮಾರು ಎಷ್ಟು ವರ್ಷಗಳಾಗಿದೆ ಎಂದು ನನಗೆ ಗೊತ್ತಿಲ್ಲ. ಸದರಿಯವರು ಮೃತಪಟ್ಟ ತರುವಾಯ ಅವರ ಹೆಸರಿನಲ್ಲಿದ್ದ ಖಾತೆ ಪಿ ಸಿ ಜಯಪ್ಪನವರ ಹೆಸರಿಗೆಬಂದಿರುತ್ತದೆ.

ಕಮಲಮ್ಮ ಎಂದರೆ ಚನ್ನಬಸಪ್ಪನ 3 ನೇ ಮಗನಾದ ನಂಜುಂಡಪ್ಪನವರ ಹೆಂಡತಿ. ಚನ್ನಬಸಪ್ಪನವರ ಮರಣ ನಂತರ 819 ರ ಆಸ್ತಿಯ ಖಾತೆ ಕಮಲಮ್ಮ ಮತ್ತು ಜಯಪ್ಪನವರ ಹೆಸರಿಗೆ ಜಂಟಿಯಾಗಿ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ಅನುಭವದಲ್ಲಿರುವ ಆಸ್ತಿಯ ಪೂರ್ವಕ್ಕೆ ಸರ್ವೆ ನಂಬರಿನ ಆಸ್ತಿ ಇದೆ ಎಂದರೆ ಸರಿ. ಪಶ್ಚಿಮಕ್ಕೆ ರಸ್ತೆ ಎಂದರೆ ಸರಿ. ಉತ್ತರಕ್ಕೆ ವಾಗೀಶ್ ರವರ ಆಸ್ತಿ ಎಂದರೆ ಸರಿ, ದಕ್ಷಿಣಕ್ಕೆ ನನ್ನ ಅನುಭವದಲ್ಲಿರುವ ಆಸ್ತಿ ಎಂದರೆ ಸರಿ . ಸದರಿ 818 ರ ಆಸ್ತಿಯ ಖಾತೆ ನನ್ನ ಹೆಸರಿಗೆ ಬರುವುದಕ್ಕೂ ಪೂರ್ವ ನನ್ನ ತಂದೆಯ ಹೆಸರಿನಲ್ಲಿತ್ತು. ನನ್ನತಂದೆಗೆ ಸದರಿ ಖಾತೆ 1978 ರಲ್ಲಿ ಬಂದಿರುತ್ತದೆ. ನನ್ನ ತಂದೆ ಮೃತಪಟ್ಟ ತರುವಾಯ 2001 ರಲ್ಲಿ ನನ್ನ ಹೆಸರಿಗೆ ಬಂದಿರುತ್ತದೆ. ಈ ರೀತಿ ಖಾತೆ ಬದಲಾವಣೆಗಾಗಿ ನಾನೇ ಅರ್ಜಿಯನ್ನುಸಲ್ಲಿಸಿದ್ದೆ ಎಂದರೆ ಸರಿ. ಸದರಿ ಕಾಲಕ್ಕೆ ನಾನು ಕೊಟ್ಟ ಆಸ್ತಿ ನಂ 818/404 ಡಿ ಎಂದು ನಮೂದಿಸಿರುತ್ತೇನೆ ಎಂದರೆ ಸರಿ.

(ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಶ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.